i7 ಯೋಜನೆಯಡಿಯಲ್ಲಿ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಮಂಜೂರಾತಿ ನಂತರ ಕಟ್ಟಡ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು.

(ಇ) ಅನುದಾನ ಲಭ್ಯತೆ ಆಧಾರದಲ್ಲಿ ಕಟ್ಟಡ ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗುವುದು

ಕಾಡಾನೆಗಳ ಹಾವಳಿ

ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು):-

424 (671) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಹಾಸನ ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಕಾಡಾನೆಗಳು ಪ್ರತಿವರ್ಷ ಮನುಷ್ಯರಿಗೆ ಹಾಗೂ ಜಮೀನಿನಲ್ಲಿ ಬೆಳೆದ ಬೆಳೆಗಳಿಗೆ ಹಾನಿ ಮಾಡುತ್ತಿರುವದು ನಿಜವೇ;

(ಇ) ಹಾಗಿದ್ದಲ್ಲಿ, ಇಂತಹ ಕಾಡಾನೆಗಳನ್ನು ಹಿಡಿದು ರಕ್ಷಿತ ಅರಣ್ಯಕ್ಕೆ ಸಾಗಿಸುತ್ತಿಲ್ಲದಿರುವ ಬಗ್ಗೆ ವಿವರ ನೀಡುವುದು;

ಶ್ರೀ ಸಿ. ಪಿ. ಯೋಗೇಶ್ವರ (ಅರಣ್ಯ ಸಚಿವರು):-

(ಅ) ಹಾಸನ ಜಿಲ್ಲೆಯ ಮಲೆನಾಡು ಪ್ರದೇಶದಲ್ಲಿ ಕಾಡಾನೆಗಳ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ;

(ಆ) ಹೌದು,

(ಇ) ಹಾಸನ ಜಿಲ್ಲೆಯಲ್ಲಿ ಹಾವಳಿ ನಡೆಸುತ್ತಿರುವ ಇಂತಹ ಕಾಡಾನೆಗಳನ್ನು ಹಿಡಿದು ರಕ್ಷಿತ ಅರಣ್ಯದೊಳಕ್ಕೆ ಸಾಗಿಸುತ್ತಿಲ್ಲವೆಂಬುದು ಸರಿಯಲ್ಲ. ಏಕೆಂದರೆ ಜಿಲ್ಲೆಯ ಮಲೆನಾಡು ಪ್ರದೇಶಗಳಾದ ಸಕಲೇಶಪುರ, ಆಲೂರು ಹಾಗೂ ಅರೆ ಮಲೆನಾಡು ಪ್ರದೇಶವಾದ ಅರಸೀಕೆರೆ ತಾಲ್ಲೂಕುಗಳಲ್ಲಿ ಇಂತಹ ಪುಂಡಾನೆಗಳನ್ನು ಗುರುತಿಸಿ 2005-06ರಲ್ಲಿ 02, 2006-07ರಲ್ಲಿ 01, 2007-08ರಲ್ಲಿ 03, 2009-10ರಲ್ಲಿ 02, 2010-11ರಲ್ಲಿ 03 ಹೀಗೆ ಒಟ್ಟು 11 ಕಾಡಾನೆಗಳನ್ನು ಸೆರೆಹಿಡಿದು ಬಂಡೀಪುರ, ನಾಗರಹೊಳೆ ರಾಷ್ಟ್ರೀಯ ಉದ್ಯಾನವನಗಳಿಗೆ ಮತ್ತು ಕಾವೇರಿ ವನ್ಯಧಾಮಕ್ಕೆ ಸಾಗಿಸಲಾಗಿರುತ್ತದೆ.

ಈಗ ಕೇಂದ್ರ ಸರ್ಕಾರವು ದಿನಾಂಕ 11–11–2011 ರಂದು 25 ಕಾಡಾನೆಗಳನ್ನು ಸೆರೆಹಿಡಿದು ಸಾಗಿಸಲು ಅನುಮತಿಸಿರುತ್ತದೆ. ಅದರಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 14029/2008 ರಲ್ಲಿ ನೀಡಿರುವ ನಿರ್ದೇಶನದಂತೆ ಆನೆಗಳನ್ನು ಸೆರೆಹಿಡಿದು ಸ್ಥಳಾಂತರಿಸುವ ಮುನ್ನ ಆಫ್ರಿಕಾ ಮತ್ತು ಏಷ್ಯಾ ಖಂಡಗಳ ಆನೆ ವಿಷಯ ತಜ್ಞರು ಹಾಗೂ ಇಲಾಖೆಯ ಅಧಿಕಾರಿಗಳ ಅಭಿಪ್ರಾಯ ಪಡೆಯಬೇಕಿದ್ದು. ಅದರಂತೆ ಇನ್ಸ್‌ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ ಹಾಗೂ ನಿರ್ದೇಶಕರು (ಆನೆಯೋಜನೆ), ಅರಣ್ಯ ಮತ್ತು ಪರಿಸರ ಮಂತ್ರಾಲಯ, ನವದೆಹಲಿ (ಕೇಂದ್ರ ಸರ್ಕಾರ) ಇವರಿಗೆ ದಿನಾಂಕ 29–11–2011 ರಂದು ಸೂಕ್ತ ಕ್ರಮಕ್ಕಾಗಿ ಕೋರಲಾಗಿದೆ.

ಆನೆ ತುಳಿತಕ್ಕೊಳಗಾದವರಿಗೆ ಪರಿಹಾರ

ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು):–

425 (672) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿಯ ತೊಳಲು ಗ್ರಾಮದಲ್ಲಿ ಮೇ, 2006ರಂದು ಅಬ್ದುಲ್ ರಜಾಕ್ ಎಂಬಾತನ ಮೇಲೆ ಕಾಡಾನೆ ದಾಳಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಆನೆ ತುಳಿತದಿಂದ ಅಬ್ದುಲ್ ರಜಾಕ್ ಎಂಬುವರ ಬೆನ್ನು ಮೂಳೆ ಮುರಿದಿದ್ದು, ಈ ಬಗ್ಗೆ ಚಿಕಿತ್ಸೆಗಾಗಿ ರಾಜ್ಯ ಸರ್ಕಾರದಿಂದ ರೂ. 34,000/– ಪರಿಹಾರ ಕೊಟ್ಟಿರುವುದು ನಿಜವೇ;

(ಇ) ಆನೆ ತುಳಿತಕ್ಕೆ ಒಳಗಾದ ಅಬ್ದುಲ್ ರಜಾಕ್ ಎಂಬುವರು ಬೆನ್ನು ಮೂಳೆ ಮುರಿತದಿಂದ ಮರಣ ಹೊಂದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೀಗೆ ಆನೆ ತುಳಿತದಿಂದ ಚೇತರಿಸಕೊಳ್ಳದೆ ಮೃತರಾದ ಅಬ್ದುಲ್ ರಜಾಕ್ ಎಂಬುವರ ತಾಯಿಯವರಿಗೆ ಸರ್ಕಾರದ ವತಿಯಿಂದ ಪರಿಹಾರವನ್ನು ಯಾವ ಕಾರಣಕ್ಕಾಗಿ ನೀಡಿರುವುದಿಲ್ಲ; ವಿವರ ನೀಡುವುದು?

ಶ್ರೀ ಸಿ. ಪಿ. ಯೋಗೇಶ್ವರ (ಅರಣ್ಯ ಸಚಿವರು):–

(ಅ) ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.

(ಆ) ಸರ್ಕಾರದಿಂದ ರೂ. 32,611/–ಗಳ ಪರಿಹಾರ ಧನವನ್ನು ಪಾವತಿಸಲಾಗಿದೆ.